**ಸಾಕ್ಷಿಗೆ ದಿನಾಂಕ 19-01-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಶ್ರೀ Sri SSPP ಅರ್ಜಿದಾರರ ಪರ ವಕೀಲರಿಂದ**

ಯಡ್ರಾಮಿ ಪೋಲಿಸ ಠಾಣೆ ಗುನ್ನಾ ಸಂಖ್ಯೆ 135/2020 ರಲ್ಲಿ ಸಲ್ಲಿಸಿದ ಹೇಳಿಕೆ ದೂರಿನ ದೃಢೀಕೃತ ನಕಲನ್ನು ಹಾಜರುಪಡಿಸಿದು ಅದನ್ನು ನಿಶಾನೆ ಪಿ-1 ಎಂದು ಗುರುತಿಸಲಾಯಿತು.

ಯಡ್ರಾಮಿ ಪೋಲಿಸ ಠಾಣೆ ಗುನ್ನಾ ಸಂಖ್ಯೆ 135/2020 ರ ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ-2 ಎಂದು ಗುರುತಿಸಲಾಯಿತು.

ಯಡ್ರಾಮಿ ಪೋಲಿಸ ಠಾಣೆ ಗುನ್ನಾ ಸಂಖ್ಯೆ 135/2020 ಅಪರಾಧ ವಿವರ ನಮೂನೆಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು.

ಯಡ್ರಾಮಿ ಪೋಲಿಸ ಠಾಣೆ ಗುನ್ನಾ ಸಂಖ್ಯೆ 135/2020 ರ ಶಿವರಾಯರವರ ಶವದ ಶವ ತನಿಖಾ ವರದಿ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು.

ಯಡ್ರಾಮಿ ಪೋಲಿಸ ಠಾಣೆ ಗುನ್ನಾ ಸಂಖ್ಯೆ 135/2020 ರ ಶಿವರಾಯರವರ ಶವದ ಶವ ಪರೀಕ್ಷಾ ವರದಿ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ-5 ಎಂದು ಗುರುತಿಸಲಾಯಿತು.

ಯಡ್ರಾಮಿ ಪೋಲಿಸ ಠಾಣೆ ಗುನ್ನಾ ಸಂಖ್ಯೆ 135/2020 ರ IMV ವರದಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ-6 ಎಂದು ಗುರುತಿಸಲಾಯಿತು.

ಯಡ್ರಾಮಿ ಪೋಲಿಸ ಠಾಣೆ ಗುನ್ನಾ ಸಂಖ್ಯೆ 135/2020 ರ ಅಂತಿಮ ವರದಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ-7 ಎಂದು ಗುರುತಿಸಲಾಯಿತು.

ವಾಹನ ನಂ.ಕೆಎ-32 ಇಎಕ್ಸ್-3371 ರ ಬಿ ಎಕ್ಟ್ರಾಕ್ಟ್ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ವಾಹನ ನಂ.ಎಂಹೆಚ್-25 ಎಆರ್-9449 ರ ಬಿ ಎಕ್ಟ್ರಾಕ್ಟ್ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

ಶಿವರಾಯರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

ಶಿವರಾಯರವರ payslip ನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1** ನೇ ಎದುರುದಾರರ ಪರ ವಕೀಲರು **ಕರೆಯಿಸಲಾಗಿ ಗೈರು ಹಾಜರಾದ ಕಾರಣ 1 ನೇ ಎದುರುದಾರರ ಪರ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಪಾಟೀಸವಾಲುಃ ಶ್ರೀ ವಿ.ಸಿ.ಎಂ.ಪಿ. ವಕೀಲರು 2 ನೇ ಎದುರುದಾರರ ಪರವಾಗಿಃ**

ಮೃತ ಶಿವರಾಯ ನನ್ನ ಮಗ. 1 ನೇ ಅರ್ಜಿದಾರರು ನನ್ನ ಹೆಂಡತಿ ಹಾಗೂ 3 ನೇ ಅರ್ಜಿದಾರರು ನನ್ನ ಮಗಳು. ನನ್ನ ಮಗ ಶಿವರಾಯನ ಮದುವೆಯಾಗಿರಲಿಲ್ಲ. ಸದರಿ ಶಿವರಾಯನಿಗೆ 29 ರಿಂದ 30 ವರ್ಷ ವಯಸ್ಸಾಗಿತ್ತು. ನಮ್ಮ ಕುಟುಂಬದ ಪಡಿತರ ಚೀಟಿ ಇದೆ. ಸದರಿ ಕುಟುಂಬದ ಪಡಿತರ ಚೀಟಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ನನ್ನ ಮಗನಿಗೆ ಸೇರಿದ ಆಧಾರ್ ಕಾರ್ಡ್ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಶಿವರಾಯ ಬೆಂಗಳೂರಿನಲ್ಲಿ ಟ್ರ್ಯಾಕ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದ. ಶಿವರಾಯ ರೇಲ್ವೆ ಇಲಾಖೆಯಲ್ಲಿ ಸುಮಾರು 4-5 ವರ್ಷಗಳಿಂದ ಕೆಲಸ ಮಾಡುತ್ತಿದ್ದ. ನಿಪಿ-11 ರ ದಾಖಲಾತಿಯನ್ನು ಸೃಷ್ಠಿಸಿಕೊಂಡು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನನ್ನ ಮಗ ರೇಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಮಗನ ಆದಾಯದಿಂದಲೇ ನಮ್ಮ ಕುಟುಂಬದ ನಿರ್ವಹಣೆ ಆಗುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನೇ ಮನೆಯ ಹಿರಿಯನಾಗಿದ್ದರಿಂದ ನಮ್ಮ ಕುಟುಂಬದ ಅವಶ್ಯಕತೆಗಳನ್ನು ನಾನೇ ಪೂರೈಸುತ್ತಿದ್ದೆ ಎಂದರೆ ಸರಿಯಲ್ಲ.

ಅಪಘಾತದ ದಿನದಂದು ದುಮ್ಮದ್ರಿ ಗ್ರಾಮಕ್ಕೆ ಮದುವೆಯಲ್ಲಿ ಭಾಗವಹಿಸಲು ಹೋಗಿದ್ದ. ಮದುವೆಯಲ್ಲಿ ಭಾಗವಹಿಸಿ ಆತ ವಾಪಾಸ್ ಬರುವಾಗ ಅಪಘಾತವಾಗಿರುತ್ತದೆ. ನನ್ನ ಮಗ ದುಮ್ಮದ್ರಿ ಗ್ರಾಮಕ್ಕೆ ದ್ವಿ-ಚಕ್ರ ವಾಹನದ ಮೇಲೆ ಹೋಗಿದ್ದ. ಸದರಿ ದ್ವಿ-ಚಕ್ರ ವಾಹನದ ಮೇಲೆ ಇಬ್ಬರು ಹೋಗಿದ್ದರು. ಸದರಿ ದ್ವಿ-ಚಕ್ರ ವಾಹನವನ್ನು ನನ್ನ ಮಗ ನಡೆಸುತ್ತಿದ್ದ. ನನ್ನ ಮಗನಿಗೆ ದ್ವಿ-ಚಕ್ರ ವಾಹನವನ್ನು ನಡೆಸಲು ಚಾಲನಾ ಪರವಾನಿಗೆ ಪತ್ರ ಇತ್ತು ಅಂತಾ ಆತ ಹೇಳುತ್ತಿದ್ದ. ನನ್ನ ಮಗನ ವಾಹನ ಚಾಲನಾ ಪರವಾನಿಗೆ ಪತ್ರ ಹಾಜರುಪಡಿಸಿಲ್ಲ ನನ್ನ ಮಗನ ಹತ್ತಿರ ವಾಹನ ಚಾಲನಾ ಪರವಾನಿಗೆ ಪತ್ರ ಇರದೇ ಇದ್ದರೂ ಇತ್ತು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತದ ದಿನದಂದು ನನ್ನ ಮಗ ಹೆಲ್ಮೇಟ್ ಧರಿಸಿದ್ದನೋ ಇಲ್ಲವೋ ಎನ್ನುವುದು ಗೊತ್ತಿಲ್ಲ. ನಾನು ಹಾಜರುಪಡಿಸಿದಂತಹ ದಾಖಲಾತಿಗಳಲ್ಲಿ ಅಪಘಾತದ ದಿನದಂದು ನನ್ನ ಮಗ ಮತ್ತು ದ್ವಿ-ಚಕ್ರ ವಾಹನದ ಹಿಂಬಯಲ್ಲಿ ಕುಳಿತಿದ್ದ ವ್ಯಕ್ತಿ ಹೆಲ್ಮೇಟ್ ಧರಿಸಿದ್ದರು ಅಂತಾ ಎಲ್ಲಿಯೂ ನಮೂದಾಗಿಲ್ಲ ಎಂದರೆ ನಾನು ದಾಖಲೆಗಳನ್ನು ನೋಡಿಲ್ಲ.

ಅಪಘಾತದ ಸಮಯದಲ್ಲಿ ನಾನು ಅಪಘಾತದ ಸ್ಥಳದಲ್ಲಿರಲಿಲ್ಲ. ಅಪಘಾತದ ವಿಚಾರವನ್ನು ನಮ್ಮ ಗ್ರಾಮದ ಜನರು ಹೇಳಿರುತ್ತಾರೆ. ಅವರ ಹೆಸರು ನೆನಪಿಲ್ಲ. ಚಂದ್ರಕಾಂತ ಗುರುನಾಥ ಬಡಿಗೇರ ಯಾರು ಅಂತಾ ಹೆಸರು ಕೇಳಿರುತ್ತೇನೆ ಆದರೆ ಅವರು ಯಾರು ನನಗೆ ಗೊತ್ತಿಲ್ಲ. ಸದರಿ ಚಂದ್ರಕಾಂತ ಸ್ಥಳದಲ್ಲಿ ಇದ್ದನೋ ಇಲ್ಲವೋ ಗೊತ್ತಿಲ್ಲ. ನನ್ನ ಮಗ ದ್ವಿ-ಚಕ್ರ ವಾಹನದ ಮೇಲೆ ಹೋಗುತ್ತಿದ್ದಾಗ ಆತನ ಎದುರಿನಿಂದ ವಾಹನ ಬಂದು ಅಪಘಾತಪಡಿಸಿರುತ್ತದೆ. MH-25 AR-9449 ರ ವಾಹನ ನನ್ನ ಮಗನಿಗೆ ಎದುರಿನಿಂದ ಬಂದು ಡಿಕ್ಕಿಪಡಿಸಿರುತ್ತದೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಮಗ ವಾಹನಾ ಚಾಲನಾ ಪರವಾನಿಗೆ ಪತ್ರ ಹೊಂದಿರಲಿಲ್ಲ ಹಾಗೂ ಆತನಿಗೆ ವಾಹನವನ್ನು ಸರಿಯಾಗಿ ಚಾಲನೆ ಮಾಡಲು ಬರದ ಕಾರಣ ಆತನ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದ ಸ್ಥಳ ತಿರುವು ರಸ್ತೆಯಾಗಿದೆ ಎಂದರೆ ನಿಜ. ಅಪಘಾತವು ತಿರುವು ರಸ್ತೆಯ ಮಧ್ಯ ಭಾಗದಲ್ಲಿ ಆಗಿದೆ ಅಂತಾ ನಿಪಿ-3ರ ಅಪರಾಧ ವಿವರ ನಮೂನೆಯ ದಾಖಲೆಯೊಂದಿಗೆ ನಮೂದಿಸಲಾದ ಕಚ್ಚಾ ನಕಾಶೆಯಲ್ಲಿ ತೋರಿಸಲಾಗಿದೆ ಎಂದರೆ ನಿಜ. ಅಪಘಾತಕ್ಕೆ ನನ್ನ ಮಗ ಸಹ ಕಾರಣೀಕರ್ತನಾಗಿದ್ದರೂ ಸಹ ಅಪಘಾತವು ಎದುರುಗಡೆಯ ವಾಹನದ ತಪ್ಪಿನಿಂದಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪರಿಹಾರ ಧನ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಠಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಅಪಘಾತವಾದ ನಂತರ ನನ್ನ ಮಗನನ್ನು ಮೊದಲಿಗೆ ಯುನೈಟೆಡ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇವೆ. ನನ್ನ ಮಗ ಅಪಘಾತದ ದಿನದಂದೇ ಮೃತಪಟ್ಟಿರುತ್ತಾನೆ. ನಮ್ಮ ಅರ್ಜಿಯಲ್ಲಿ ನಮೂದಿಸಿ ಕೇಳಿದ ಪರಿಹಾರದ ಮೊತ್ತಕ್ಕೆ ಯಾವುದೇ ಆಧಾರ ಇಲ್ಲ ಎಂದರೆ ಅಂದಾಜಿನ ಮೇಲೆ ಕೇಳಿರುತ್ತೇನೆಂದರೆ ನನಗೆ ಗೊತ್ತಿಲ್ಲ.

ಮರುವಿಚಾರಣೆಃ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಜೇವರ್ಗಿ